ಕರ್ನಾಟಕ ವಿಧಾನ ಪರಿಷತ್

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	688
2.	ಸದಸ್ಯರ ಹೆಸರು	:	ಶ್ರೀ.ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ)
3.	ಉತ್ತರಿಸಬೇಕಾದ ದಿನಾಂಕ	:	19.02.2018
4.	ಉತ್ತರಿಸಬೇಕಾದ ಸಚಿವರು	:	ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
(ಅ)	ರಾಜ್ಯದಲ್ಲಿ ಕ್ಯಾನ್ಸರ್ ರೋಗದಿಂದ ಬಳಲುತ್ತಿರುವ ಜನರ ಸಂಖ್ಯೆ ಎಷ್ಟು; ವಿವಿಧ ಕ್ಯಾನ್ಸರ್ ರೋಗಗಳಿಗೆ ತುತ್ತಾಗಿರುವವರ ಸಂಖ್ಯೆ ಹಾಗೂ ಈ ರೋಗಕ್ಕೆ ಒಳಗಾಗಿರುವ ಪುರುಷ ಮತ್ತು ಮಹಿಳೆಯರ ವಿವರ ನೀಡುವುದು;	ರಾಜ್ಯದಲ್ಲಿ 2017ರ ಅಂತ್ಯಕ್ಕೆ ಇರುವಂತೆ ಕ್ಯಾನ್ಸರ್ ರೋಗದಿಂದ ಬಳಲುತ್ತಿರುವ ರೋಗಿಗಳ ಅಂದಾಜು ಸಂಖ್ಯೆ: ಪುರುಷರು - 27,782 ಮಹಿಳೆಯರು - 35,581 ಒಟ್ಟು - 63,363
(ಆ)	ರಾಜ್ಯದಲ್ಲಿ ಯಾವ ಕ್ಯಾನ್ಸರ್‌ನಿಂದ ಅತೀ ಹೆಚ್ಚು ಜನ ಬಳಲುತ್ತಿರುವರು;	ರಾಜ್ಯದಲ್ಲಿ ಈ ಕೆಳಕಂಡ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಪುರುಷರು – ಶ್ವಾಸಕೋಶ, ಪ್ರೋಸ್ಟೇಟ್, ಹೊಟ್ಟೆ, ಅನ್ನನಾಳ, ನಾಲಿಗೆ ಮಹಿಳೆಯರು – ಸ್ತನ ಕ್ಯಾನ್ಸರ್, ಗರ್ಭಕೋಶ, ಅಂಡಾಶಯ, ಬಾಯಿ ಕ್ಯಾನ್ಸರ್ ಮತ್ತು ಗರ್ಭದ ಚೀಲದ ಕ್ಯಾನ್ಸರ್.
(ಇ)	ರಾಜ್ಯದಲ್ಲಿ ಕ್ಯಾನ್ಸರ್ ಅಂತಹ ಮಾರಕ ರೋಗಕ್ಕೆ ಚಿಕಿತ್ಸೆ ನೀಡಲು ಎಷ್ಟು ಆಸ್ಪತ್ರೆಗಳಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ;	ರಾಜ್ಯದಲ್ಲಿ ಕ್ಯಾನ್ಸರ್ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಗಳಾದ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ, ಪೆರಿಫೆರಲ್ ಕ್ಯಾನ್ಸರ್ ಕೇಂದ್ರ, ಕಲಬುರಗಿ, ಮಂಡ್ಯ ವೈದ್ಯಕೀಯ ಕಾಲೇಜು, ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ಮೈಸೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ಕಿಮೋಥೆರಪಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ ಹಾಗೂ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ರೇಡಿಯೋಥೆರಪಿ ಮತ್ತು ಕಿಮೋಥೆರಪಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ.
(ಈ)	ವರ್ಷದಿಂದ ವರ್ಷಕ್ಕೆ ಕ್ಯಾನ್ಸರ್ ರೋಗ ಹೆಚ್ಚುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗಿದ್ದು, ಇದು ನಿಜವೇ; ಹಾಗಿದ್ದಲ್ಲಿ, ಕ್ಯಾನ್ಸರ್ ರೋಗ ಹೆಚ್ಚುತ್ತಿರುವ ಬಗ್ಗೆ ಕಾರಣಗಳೇನು ? (ವಿವರ ನೀಡುವುದು)	ಕ್ಯಾನ್ಸರ್ ಪಾಯಿಲೆಯು ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಪುರುಷ ಮತ್ತು ಮಹಿಳೆಯರಲ್ಲಿ ಹೆಚ್ಚುತ್ತಲಿದೆ. ವಿವಿಧ ಪ್ರಕಾರದ ತಂಬಾಕು ಸೇವನೆ, ಆಹಾರ ಪದ್ಧತಿಯಲ್ಲಾದ ವ್ಯತ್ಯಾಸ ಮತ್ತು ಪಾಶ್ಚಾತ್ಯ ಜೀವನ ಶೈಲಿಯ ಅನುಕರಣೆ ಹಾಗೂ ಪರಿಸರ ಮಾಲಿನ್ಯಕ್ಕೆ ಸಂಬಂಧಪಟ್ಟ ಕಾರಣಗಳಿಂದಾಗಿ ಕ್ಯಾನ್ಸರ್ ರೋಗ ಹೆಚ್ಚುತ್ತಿದೆಯೆಂದು ಸಂಶೋಧನೆಗಳಿಂದ ಕಂಡುಬಂದಿದೆ.

ಸಂಖ್ಯೆ: ಆಕುಕ 75 ಕೆವಿಎಂ 2017

(ಡಾ. ಶರಣಪ್ರಕಾಶ ಆರ್. ಪಾಟೀಲ)
ವೈದ್ಯಕೀಯ ಶಿಕ್ಷಣ ಸಚಿವರು